CAREERINDIA

ಸಂಕೇತ ಸಂಖ್ಯೆ : **01-K**

**Code No. : 01-K**

# CCE RR

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**( ಹೊಸ ಪಠ್ಯಕ್ರಮ / New Syllabus )**

**( ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater )**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರು ಪುಸ್ತಕವು ಮೂರು ವಿಭಾಗಗಳನ್ನು ಹೊಂದಿದೆ.

ii) **ವಿಭಾಗ 'ಎ'**ಯಲ್ಲಿ ಗದ್ಯ, ಪದ್ಯ ಮತ್ತು ಪೋಷಕ ಅಧ್ಯಯನಗಳ 67 ಅಂಕಗಳ ಒಟ್ಟಾರೆ 31 ಪ್ರಶ್ನೆಗಳಿವೆ.

iii) **ವಿಭಾಗ 'ಬಿ'**ಯಲ್ಲಿ ವ್ಯಾಕರಣ, ಛಂದಸ್ಸು ಮತ್ತು ಅಲಂಕಾರಗಳ 20 ಅಂಕಗಳ ಒಟ್ಟಾರೆ 16 ಪ್ರಶ್ನೆಗಳಿವೆ.

iv) **ವಿಭಾಗ 'ಸಿ'**ಯಲ್ಲಿ ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲಗಳ 13 ಅಂಕಗಳ ಒಟ್ಟಾರೆ 3 ಪ್ರಶ್ನೆಗಳಿವೆ.

v) ಸೂಚನೆಗೆ ಅನುಸಾರ ಪ್ರತೀ ಪ್ರಶ್ನೆಗೂ ಉತ್ತರವನ್ನು, ಉತ್ತರಕ್ಕಾಗಿ ಮೀಸಲಿಟ್ಟ ಆಯಾ ಜಾಗದಲ್ಲೇ ಬರೆಯಬೇಕು.

vi) ಛಂದಸ್ಸನ್ನು ಹೊರತುಪಡಿಸಿ ಉಳಿದೆಲ್ಲೂ ಸೀಸದ ಕಡ್ಡಿ (ಪೆನ್ಸಿಲ್) ಯಲ್ಲಿ ಉತ್ತರ ಬರೆಯುವಂತಿಲ್ಲ. ಹಾಗೇನಾದರೂ ಬರೆದರೆ ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

vii) ಉತ್ತರಗಳು ನೇರವೂ, ಸ್ಪಷ್ಟವೂ ಆಗಿರಲಿ.

viii) ಪ್ರಶ್ನೆ ಪತ್ರಿಕೆಯನ್ನು ಓದಿ ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ix) ನಿಮ್ಮ ಪ್ರಶೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

www.careerindia.com

CAREERINDIA



## ವಿಭಾಗ – 'ಎ'

### (ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)

ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ***ಒಂದೊಂದು*** ವಾಕ್ಯದಲ್ಲಿ ಉತ್ತರಿಸಿ : $11 \times 1 = 11$

1. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು ?
2. ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಭಿನ್ನಹ ಮಾಡಿದರು ?
3. ದೇವನೂರರ 'ನನ್ನ ದೇವರು' ಯಾರು ಎಂಬುದನ್ನು ತಿಳಿಸಿ.
4. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು ?
5. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು ?
6. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?
7. ಹಲಗಲಿಯ ಗುರುತು ಉಳಿಯದಂತಾದುದು ಏಕೆ ?
8. ಮಾದ್ರಿಯ ಮಕ್ಕಳು ಯಾರು ಯಾರು ?
9. ಪಂಪನು ತನ್ನ ಹೆಸರನ್ನು ಏಕೆ ಕೆತ್ತಲಿಲ್ಲ ?
10. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ ?
11. ಪಾರಿವಾಳಗಳ ಆನಂದಕ್ಕೆ ಕಾರಣವೇನು ?

ಈ ಕೆಳಗಿನ ಪ್ರಶ್ನೆಗಳಿಗೆ **ಮೂರು–ನಾಲ್ಕು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $9 \times 2 = 18$

12. ವಿದ್ಯಾರ್ಥಿಗಳು ಗೊರೂರರನ್ನು ಕಂಡು ಭಯಗೊಳ್ಳಲು ಕಾರಣವೇನು ?
13. ಶಾಲೆಗೆ ಹೋದ ಉದ್ದೇಶವನ್ನು ಗೊರೂರರು ಮರೆತದ್ದು ಏಕೆ ?
14. ಜೈನ ಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು ?
15. ವಚನ ಧರ್ಮದ ಬಗೆಗೆ ದೇವನೂರರ ಅಭಿಪ್ರಾಯವೇನು ?
16. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?
17. ಯಜ್ಞಾಶ್ವದ ಹಣೆಯಲ್ಲಿದ್ದ ಫಲಕದಲ್ಲಿ ಏನೆಂದು ಬರೆಯಲಾಗಿತ್ತು ?
18. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.
19. ಸಮಾಜ ಸುಧಾರಣೆ ಯಾವಾಗ ಸಾಧ್ಯವೆಂದು ಲೇಖಕರಾದ ಎಚ್. ನರಸಿಂಹಯ್ಯನವರು ವಿವರಿಸಿದ್ದಾರೆ ?
20. ಕೊಕ್ಕರೆ ಎಂಬ ಅರ್ಥ ಬರುವ ಒಗಟಿನ ಅರ್ಥವನ್ನು ಬರೆಯಿರಿ.



www.careerindia.com

CAREERINDIA



ಈ ಕೆಳಗಿನ ವಾಕ್ಯಗಳ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ : 4 × 3 = 12

21. "ತಾಯಿ ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ"

22. "ನಾನು ಮುಖ ಮೇಲಾಗಿ ಬಿದ್ದೀದ್ದೇನೆ"

23. "ಮಾರಿಗೌತಣವಾಯ್ತು ನಾಳಿನ ಭಾರತವು"

24. "ಜೀವಗಳು ಶವವಾದುವು"

ಈ ಕೆಳಗಿನ ಕವಿಗಳ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6

25. ದ.ರಾ. ಬೇಂದ್ರೆ

26. ದುರ್ಗಸಿಂಹ

27. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ಕಲುಷಿತವಾದೀ ______________________

______________________________

______________________________

_________________________ಮುಟ್ಟೋಣ.

***ಅಥವಾ***

ಮತಗಳೆಲ್ಲವೂ ______________________

______________________________

______________________________

__________________________ಬಿತ್ತೋಣ.

28. ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನಗಳಿಗೆ ಉತ್ತರ ಬರೆಯಿರಿ : 4 × 1 = 4

ಅಂದಣವನೇರಿದ ಸೊಣಗನಂತೆ
ಕಂಡೊಡೆ ಬಿಡದು ಮುನ್ನಿನ ಸ್ವಭಾವವನು;
ಸುಡು! ಸುಡು!! ಮನವಿದು ವಿಷಯಕ್ಕೆ ಹರಿವುದು;
ಮೃಡ, ನಿಮ್ಮನನುದಿನ ನೆನೆಯಲೀಯದು
ಎನ್ನೊಡೆಯ ಕೂಡಲ ಸಂಗಮದೇವಾ
ನಿಮ್ಮ ಚರಣವ ನೆನೆವಂತೆ ಕರುಣಿಸು
ಸೆಱಗೊಡ್ಡಿ ಬೇಡುವೆ, ನಿಮ್ಮ ಧರ್ಮ

*ಪ್ರಶ್ನೆಗಳು :*

ಅ) ಬಸವಣ್ಣನವರು ಮನಸ್ಸನ್ನು ಯಾವುದಕ್ಕೆ ಹೋಲಿಸಿದ್ದಾರೆ ?

www.careerindia.com

CAREERINDIA



ಆ) ಬಸವಣ್ಣನವರು ಮನಸ್ಸನ್ನು ಸುಡು ಸುಡು ಎನ್ನಲು ಕಾರಣವೇನು ?

ಇ) ಬಸವಣ್ಣನವರು ಮೃಡನನ್ನು ಏನೆಂದು ಬೇಡಿಕೊಂಡಿದ್ದಾರೆ ?

ಈ) ಈ ವಚನದಲ್ಲಿ ಮನಸ್ಸಿನ ಬಗೆಗೆ ನೀವು ಮೆಚ್ಚಿಕೊಂಡ ಅಂಶ ಯಾವುದು ?

ಈ ಕೆಳಗಿನ ಪ್ರಶ್ನೆಗಳಿಗೆ ***ಎಂಟು*** ಅಥವಾ ***ಹತ್ತು*** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

29. ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿದ್ದ ಸಮಯದಲ್ಲಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

***ಅಥವಾ***

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯನವರು ನೀಡಿದ ಕೊಡುಗೆಯನ್ನು ಬರೆಯಿರಿ.

30. ಧೃತರಾಷ್ಟ್ರನು ಸಂಧಿ ಮಾಡಿಕೊ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು ?

***ಅಥವಾ***

ಗಾಂಧಾರಿ ಧೃತರಾಷ್ಟ್ರರು ದುರ್ಯೋಧನನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.

ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : $2 \times 2 = 4$

31. ಗೃಹಸ್ಥಾಶ್ರಮವು ಧನ್ಯವೆಂದು ಕಾಳಿದಾಸನು ಹೇಳುವುದಿಲ್ಲ. ಅವನು ಕಲ್ಪಿಸಿದ ಒಬ್ಬ ಋಷಿ ಆರಣ್ಯಕ ಆ ಮಾತನ್ನು ಹೇಳುತ್ತಾನೆ. ದೂರದ ಗುಡ್ಡ ಕಣ್ಣಿಗೆ ನುಣ್ಣಗೆ. ಗೃಹಸ್ಥಾಶ್ರಮದ ಅಗ್ನಿದಿವ್ಯಗಳು ಆರಣ್ಯಕರಿಗೆ ಹೇಗೆ ಗೊತ್ತಾಗಬೇಕು ?

ಆದರೂ ಒಂದರ್ಥದಲ್ಲಿ ಗೃಹಸ್ಥಾಶ್ರಮವು ಧನ್ಯವೆಂದೇ ಹೇಳಬೇಕು. ಅದನ್ನು ಆಶ್ರಯಿಸಿದ ಅಂತರ್‌ಜೀವಿಗೆ ರಾಜಯೋಗ ಹಾಗೂ ಕರ್ಮಯೋಗದ ಮಾರ್ಗಗಳೆರಡೂ ತೆರೆದಿರುತ್ತವೆ. ಅವನು ತನ್ನ ಅಂತಃಸಾಗರದಲ್ಲಿ ಮುಳುಗಿ ತಂದ ರತ್ನಗಳನ್ನು ಪರೀಕ್ಷಿಸುವ ರತ್ನರಸಿಕರು ಅವನ ಸುತ್ತಣ ಸಮಾಜದಲ್ಲಿಯೇ ಇರುತ್ತಾರೆ. ಹೆಜ್ಜೆಹೆಜ್ಜೆಗೆ ಅವನ ಪರೀಕ್ಷೆಯಾಗುತ್ತದ. ತಪ್ಪಡಿಯಿಟ್ಟೊಡನೆ ಅವನ ತಲೆಗೆ ದಂಡ ಕಟ್ಟಲಾಗುತ್ತದೆ. ಒಮ್ಮೊಮ್ಮೆ ತಪ್ಪಿಲ್ಲದೆಯೂ ಅವನು ದಂಡವನ್ನು ತೆರಬೇಕಾಗಬಹುದು. ಹೀಗೆ ಸಮ್ಯಕ್‌ದರ್ಶನದ ಸಮತೂಕವನ್ನು ಪಡೆಯದೆ ಅವನಿಗೆ ಗತ್ಯಂತರವಿಲ್ಲ.

*ಪ್ರಶ್ನೆಗಳು :*

ಅ) ಗೃಹಸ್ಥಾಶ್ರಮವು ಶ್ರೇಷ್ಠ ಏಕೆ ?

ಆ) 'ಅಂತರ್‌ಜೀವಿಯು ಸಮ್ಯಕ್‌ದರ್ಶನದ ಸಮತೂಕವನ್ನು ಪಡೆಯದೆ ಅವನಿಗೆ ಬೇರೆ ದಾರಿಯಿಲ್ಲ' ಏಕೆ ?

www.careerindia.com

CAREERINDIA



## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

ಈ ಕೆಳಗಿನ ಪ್ರಶ್ನೆಗಳಿಗೆ/ಅಪೂರ್ಣ ಹೇಳಿಕೆಗಳಿಗೆ ಪ್ರತಿಯೊಂದಕ್ಕೂ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ, ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ : 10 × 1 = 10

32. 'ಅಬ್ಧಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

    (ಎ) ಶ್ಚುತ್ವ ಸಂಧಿ (ಬಿ) ಜಶ್ತ್ವ ಸಂಧಿ

    (ಸಿ) ವೃದ್ಧಿ ಸಂಧಿ (ಡಿ) ಅನುನಾಸಿಕ ಸಂಧಿ

33. 'ಅಂಶಿ ಸಮಾಸ'ಕ್ಕೆ ಸೂಕ್ತ ಉದಾಹರಣೆ ಇದಾಗಿದೆ

    (ಎ) ಇಮ್ಮಾವು (ಬಿ) ಮುಕ್ಕಣ್ಣ

    (ಸಿ) ಕಡೆಗಣ್ಣು (ಡಿ) ಕಣ್ಣೆರೆ

34. 'ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ' – ಈ ಚಿಹ್ನೆಯನ್ನು ಬಳಸಲಾಗುವುದು

    (ಎ) ಉದ್ಧರಣ ಚಿಹ್ನೆ (ಬಿ) ವಿವರಣಾತ್ಮಕ ಚಿಹ್ನೆ

    (ಸಿ) ಆವರಣ ಚಿಹ್ನೆ (ಡಿ) ವಾಕ್ಯವೇಷ್ಟನ ಚಿಹ್ನೆ

35. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು ಹೀಗೆ ಕರೆಯುತ್ತೇವೆ

    (ಎ) ಮಿಶ್ರವಾಕ್ಯ (ಬಿ) ಸಂಯೋಜಿತ ವಾಕ್ಯ

    (ಸಿ) ಸಾಮಾನ್ಯ ವಾಕ್ಯ (ಡಿ) ಅಪೂರ್ಣ ವಾಕ್ಯ

36. 'ಸೊಗಸಾಗಿ' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ

    (ಎ) ಅನುಕರಣಾವ್ಯಯ (ಬಿ) ಸಾಮಾನ್ಯಾವ್ಯಯ

    (ಸಿ) ಭಾವಸೂಚಕಾವ್ಯಯ (ಡಿ) ಸಂಬಂಧಾರ್ಥಕಾವ್ಯಯ

37. 'ಸಾಬೂನು' ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ

    (ಎ) ಹಿಂದೂಸ್ಥಾನಿಯಿಂದ (ಬಿ) ಉರ್ದುವಿನಿಂದ

    (ಸಿ) ಪೋರ್ಚುಗೀಸಿನಿಂದ (ಡಿ) ಪಾರ್ಸಿಯಿಂದ

www.careerindia.com

CAREERINDIA



38. 'ಪೂಜಾರಿ' ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ

(ಎ) ರೂಢನಾಮ (ಬಿ) ಅನ್ವರ್ಥಕನಾಮ

(ಸಿ) ಅಂಕಿತನಾಮ (ಡಿ) ಭಾವನಾಮ

39. ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಮತ್ತೆ ಮತ್ತೆ ಬಂದರೆ ಅದನ್ನು ಹೀಗೆನ್ನುವರು

(ಎ) ಛೇಕಾನುಪ್ರಾಸ (ಬಿ) ಯಮಕ

(ಸಿ) ವೃತ್ಯನುಪ್ರಾಸ (ಡಿ) ಚಿತ್ರ ಕವಿತ್ವ

40. ಗುರು ಲಘು ಕೊನೆಯಲ್ಲಿ ಬರಲು ಈ ಗಣಗಳಾಗುತ್ತವೆ

(ಎ) ಮನ ಗಣ (ಬಿ) ಭಯ ಗಣ

(ಸಿ) ಜರ ಗಣ (ಡಿ) ಸತ ಗಣ

41. 'ಸೇರೀತು' ಪದವು ಈ ಕ್ರಿಯಾರೂಪಕ್ಕೆ ಸೇರಿದುದಾಗಿದೆ

(ಎ) ವಿಧ್ಯರ್ಥಕ (ಬಿ) ಸಂಭಾವನಾರ್ಥಕ

(ಸಿ) ನಿಷೇಧಾರ್ಥಕ (ಡಿ) ಸಾಮಾನ್ಯಾರ್ಥಕ

ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದದ ಸಂಬಂಧೀಪದವನ್ನು ಬರೆಯಿರಿ : $4 \times 1 = 4$

42. ಬಟ್ಟೆಬರೆ : ಜೋಡುನುಡಿ :: ಕಟ್ಟಕಡೆಗೆ : ........................ .

43. ಯಜ್ಞ : ಜನ್ನ :: ಕಾರ್ಯ : ........................ .

44. ಶ್ರಮಣಿ : ತಪಸ್ವಿನಿ :: ಮಧುಕರ : ........................ .

45. ಭೀಮನಂತೆ : ತದ್ಧಿತಾಂತಾವ್ಯಯ :: ಚೆಲುವಿಕೆ : ........................ .

ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : $1 \times 3 = 3$

46. ಎಡದ ಮೈಯಲಿ ಕೌರವೇಂದ್ರರ
ಗಡಣ ಬಲದಲಿ ಪಾಂಡು ತನಯರ
ಗಡಣವಿದಿರಲಿ ಮಾದ್ರ ಮಾಗಧ ಯಾದವಾದಿಗಳು

***ಅಥವಾ***

ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ
ತೊತ್ತಳದುಳಿದುದು ವಾಲ್ಮೀಕಿಮುನಿನಾಥನೇ
ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ

www.careerindia.com

CAREERINDIA



ಈ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಗೊಳಿಸಿ : 1 × 3 = 3

47. 'ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು'

*ಅಥವಾ*

'ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ'

## ವಿಭಾಗ – 'ಸಿ'

## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

48. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ***ಒಂದನ್ನು*** ವಿಸ್ತರಿಸಿ ಬರೆಯಿರಿ : 1 × 3 = 3

* ಮಾತು ಬೆಳ್ಳಿ ಮೌನ ಬಂಗಾರ
* ಕೈ ಕೆಸರಾದರೆ ಬಾಯಿ ಮೊಸರು
* ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು

49. ನಿಮ್ಮ ಶಾಲೆಯಲ್ಲಿ ಆಚರಿಸಿದ 'ಕನ್ನಡ ರಾಜ್ಯೋತ್ಸವ' ಸಮಾರಂಭದ ವರದಿಯನ್ನು ಉದಯವಾಣಿ ಪತ್ರಿಕೆಯಲ್ಲಿ ಪ್ರಕಟಿಸುವಂತೆ ಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರವೊಂದನ್ನು ಬರೆಯಿರಿ. 1 × 5 = 5

*ಅಥವಾ*

ನಿಮ್ಮನ್ನು ಘನಚಂದ್ರಪುರದ ಬಸವೇಶ್ವರ ನಗರದಲ್ಲಿರುವ ಚಂದ್ರಮತಿ ಎಂದು ಭಾವಿಸಿ, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಮಕ್ಕಳ ದಿನಾಚರಣೆ' ಕಾರ್ಯಕ್ರಮದ ಸಾಂಸ್ಕೃತಿಕ ಚಟುವಟಿಕೆಯ ಸಂಭ್ರಮವನ್ನು ಕುರಿತು ಬೆಂಗಳೂರಿನ ಜಯನಗರದಲ್ಲಿರುವ ನಿಮ್ಮ ತಾಯಿ ವರಲಕ್ಷ್ಮಿಗೆ ಪತ್ರವೊಂದನ್ನು ಬರೆಯಿರಿ.

50. ಈ ಕೆಳಗಿನ ಯಾವುದಾದರೂ ***ಒಂದು*** ವಿಷಯದಲ್ಲಿ ಹತ್ತು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 × 5 = 5

* ಬಾಲ ಸ್ವಚ್ಛತಾ ಸಪ್ತಾಹ ಕಾರ್ಯಕ್ರಮದ ಮಹತ್ವ
* ಜ್ಞಾನಾಭಿವೃದ್ಧಿಯಲ್ಲಿ ಗ್ರಂಥಾಲಯದ ಪಾತ್ರ
* ಜಾಗತಿಕ ತಾಪಮಾನದ ಪರಿಣಾಮ

www.careerindia.com